**Model Certificate for Tenders for Works wherever sub-contracting is allowed as per rules:**

"I have read the clause regarding restrictions on procurement from a bidder of a country which shares a land border with India and on sub-contracting to contractors from such countries; I certify that this bidder is not from such a country or, if from such a country, has been registered with the Competent Authority and will not sub-contract any work to a contractor from such countries unless such contractor is registered with the Competent Authority. I hereby certify that this bidder fulfils all requirements in this regard and is eligible to be considered. (Where applicable, evidence of valid registration by the Competent Authority shall be attached)."

**Model additional certificate by Bidders in the cases of specified ToT:**

*"I have read the clause regarding restrictions on procurement from a bidder having Transfer of Technology (ToT) arrangement. I certify that this bidder does not have any ToT arrangement requiring registration with the competent authority".*

OR

*"I have read the clause regarding restrictions on procurement from a bidder having Transfer of Technology (ToT) arrangement. I certify that this bidder has valid registration to participate in this procurement".*

**********

**PR-158**

<u>ಕರ್ನಾಟಕ ಸರ್ಕಾರದ ನಡವಳಿಗಳು</u>

**ವಿಷಯ:** ಎದ್ದುಕಾಣುವ ಅಂಗವೈಕಲ್ಯವನ್ನುಳ್ಳ ಸರ್ಕಾರಿ ನೌಕರರಿಗೆ ಗುಂಪು-ಡಿ ಮತ್ತು ಗುಂಪು-ಸಿ ವೃಂದಗಳಿಗೆ ನೀಡುವ ಮುಂಬಡ್ತಿಯಲ್ಲಿ ಮೀಸಲಾತಿಯನ್ನು ಕಲ್ಪಿಸುವ ಬಗ್ಗೆ.

**ಪ್ರಸ್ತಾವನೆ:**

.ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ, 2016 (2016 ರ ಕೇಂದ್ರ ಅಧಿನಿಯಮ ಸಂಖ್ಯೆ 49) [The Rights of Persons with Disabilities Act, 2016 (Central Act No. 49 of 2016] ರ ಸೆಕ್ಷನ್ 34ರ ಉಪ ಸೆಕ್ಷನ್ (1)ರ ಮೊದಲನೇ ಪರಂತುಕದಲ್ಲಿ ಈ ಕೆಳಕಂಡಂತೆ ಆಸ್ಪದವನ್ನು ಕಲ್ಪಿಸಲಾಗಿರುತ್ತದೆ:-

> "Provided that the reservation in promotion shall be in accordance with such instructions as are issued by the appropriate Government from time to time."

2. ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸಿವಿಲ್ ಅಪೀಲು ಸಂಖ್ಯೆ: 1567/2017- ಶ್ರೀ ಸಿದ್ದರಾಜು ವಿರುದ್ಧ ಕರ್ನಾಟಕ ರಾಜ್ಯ ಮತ್ತು ಇತರರು ಹಾಗೂ ಸಂಬಂಧಿಸಿದ ಇತರ ಸಿವಿಲ್ ಅಪೀಲುಗಳಲ್ಲಿ ದಿನಾಂಕ: 14.01.2020 ರಂದು ನೀಡಿರುವ ತೀರ್ಪಿಗೆ ಸಂಬಂಧಿಸಿದಂತೆ ಸಲ್ಲಿಸಲಾಗಿದ್ದ ಮಿಸಲೇನಿಯಸ್ ಅಪ್ಲಿಕೇಷನ್ ಸಂಖ್ಯೆ: 2171/2020 ಹಾಗೂ ಸಂಬಂಧಿಸಿದ ಇತರ ಅರ್ಜಿಗಳಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ: 28.09.2021 ರಂದು ನೀಡಿದ ಆದೇಶದ ಕಂಡಿಕೆ 5 ರಲ್ಲಿ ಕೇಂದ್ರ ಸರ್ಕಾರಕ್ಕೆ ಈ ಕೆಳಕಂಡಂತೆ ನಿರ್ದೇಶನ ನೀಡಿರುತ್ತದೆ:-

> "5. Having examined the judgments of this Court and the submissions made on behalf of the parties, we are of the opinion that there is no ambiguity in the judgments which warrants any clarification. The Union of India is directed to issue instructions regarding reservation in promotion as provided in Section 34 of the Rights of Persons with Disabilities Act, 2016 within a period of four months from today."

3. ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ: 28.09.2021 ರ ಆದೇಶದಲ್ಲಿ ನೀಡಿದ ಮೇಲೆ ಉದ್ಧರಿಸಲಾದ ನಿರ್ದೇಶನವನ್ನು ಉಲ್ಲೇಖಿಸಿ, ಕೇಂದ್ರ ಸರ್ಕಾರವು ದಿನಾಂಕ: 17.05.2022ರ ಅಧಿಕೃತ ಜ್ಞಾಪನ ಸಂಖ್ಯೆ: 36012/1/2020-Estt.(Res.-II) ರಲ್ಲಿ ಎದ್ದುಕಾಣುವ ಅಂಗವೈಕಲ್ಯ (Benchmark disability) ವನ್ನುಳ್ಳ ಕೇಂದ್ರ ಸರ್ಕಾರಿ ನೌಕರರಿಗೆ ಮುಂಬಡ್ತಿಯಲ್ಲಿ ಮೀಸಲಾತಿ ಆಸ್ಪದವನ್ನು ಕಲ್ಪಿಸಿರುತ್ತದೆ. ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977 ರ ನಿಯಮ 2 ರ ಉಪ ನಿಯಮ (1) ರ ಖಂಡ (ಎಲ್ಎಲ್) ರಲ್ಲಿ "ಎದ್ದುಕಾಣುವ ಅಂಗವೈಕಲ್ಯವನ್ನುಳ್ಳ ವ್ಯಕ್ತಿ" ("Person with Benchmark disability") ಎಂಬುದನ್ನು ಈ ಕೆಳಕಂಡಂತೆ ಪರಿಭಾಷಿಸಲಾಗಿದೆ:

> "(ಎಲ್ಎಲ್):"**ಎದ್ದುಕಾಣುವ ಅಂಗವೈಕಲ್ಯವನ್ನುಳ್ಳ ವ್ಯಕ್ತಿ**" ಎಂಬುದು ಕಾಲಕಾಲಕ್ಕೆ ಮಾಡಲಾಗುವ ತಿದ್ದುಪಡಿಗೆ ಒಳಪಟ್ಟಂತೆ ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ, 2016 (2016ರ ಕೇಂದ್ರ ಅಧಿನಿಯಮ 49) ರಲ್ಲಿ ಒದಗಿಸಲಾದ ವ್ಯಾಖ್ಯಾನದ ಅರ್ಥವನ್ನೇ ಹೊಂದಿರುತ್ತದೆ."

4. ಮೇಲ್ಕಂಡ ಹಿನ್ನೆಲೆಯಲ್ಲಿ, ಎದ್ದುಕಾಣುವ ಅಂಗವೈಕಲ್ಯವನ್ನುಳ್ಳ ಸರ್ಕಾರಿ ನೌಕರರಿಗೆ ಮುಂಬಡ್ತಿಯಲ್ಲಿ ಮೀಸಲಾತಿ ಆಸ್ಪದವನ್ನು ಕಲ್ಪಿಸುವ ಬಗ್ಗೆ ಸರ್ಕಾರ ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 121 ಸೆನೆನಿ 2020</u>**

**<u>ಬೆಂಗಳೂರು, ದಿನಾಂಕ: 28.03.2023.</u>**

5. ರಾಜ್ಯ ಸಿವಿಲ್ ಸೇವೆಗಳಲ್ಲಿನ ಗ್ರೂಪ್-ಡಿ ಮತ್ತು ಗ್ರೂಪ್-ಸಿ ವೃಂದಗಳಿಗೆ ಸೇರಿದ ಹುದ್ದೆಗಳಿಗೆ ನೀಡುವ ಮುಂಬಡ್ತಿಯಲ್ಲಿ ಎದ್ದುಕಾಣುವ ಅಂಗವೈಕಲ್ಯವನ್ನುಳ್ಳ ಸರ್ಕಾರಿ ನೌಕರರಿಗೆ ಶೇಕಡ 4 ರಷ್ಟು ಮೀಸಲಾತಿ ಆಸ್ಪದವನ್ನು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಕಲ್ಪಿಸಲಾಗಿದೆ:

(1) ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ 2016ರ ಅಧಿನಿಯಮದ ಅನುಸೂಚಿಯಲ್ಲಿ ನಿರ್ಧಿಷ್ಟಪಡಿಸಲಾದ ಎದ್ದುಕಾಣುವ ಅಂಗವೈಕಲ್ಯವನ್ನುಳ್ಳ ಸರ್ಕಾರಿ ನೌಕರರಿಗೆ ಮುಂಬಡ್ತಿಯಲ್ಲಿ ಮೀಸಲಾತಿ ಆಸ್ಪದವು ಅನ್ವಯವಾಗುತ್ತದೆ.

(2) 2016ರ ಸದರಿ ಅಧಿನಿಯಮದ ಸೆಕ್ಷನ್ 34ರ ಉಪ ಸೆಕ್ಷನ್ (1) ರಡಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರ ಸಚಿವಾಲಯದ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ, ವಿಶೇಷ ಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯು, ಅಂಗವೈಕಲ್ಯವನ್ನುಳ್ಳ ವ್ಯಕ್ತಿಗಳಿಂದ ಭರ್ತಿ ಮಾಡಬಹುದಾದ ಹುದ್ದೆಗಳನ್ನು ಗುರುತಿಸಿ ಹೊರಡಿಸಲಾದ ಅಧಿಸೂಚನೆಗಳಲ್ಲಿ ಒಳಗೊಂಡ ಹುದ್ದೆಗಳಿಗೆ ಮಾತ್ರ ಮುಂಬಡ್ತಿಯಲ್ಲಿ ಮೀಸಲಾತಿಯ ಮೇಲ್ಕಂಡ ಆಸ್ಪದವು ಅನ್ವಯವಾಗುತ್ತದೆ.

(3)ಮುಂಬಡ್ತಿ ಮೀಸಲಾತಿಯ ಸೌಲಭ್ಯವನ್ನು ಪಡೆಯಲು ಕೋರಲು ಇಚ್ಚಿಸಿದ, ಎದ್ದುಕಾಣುವ ಅಂಗವೈಕಲ್ಯವನ್ನುಳ್ಳ ಸರ್ಕಾರಿ ನೌಕರನು ಕರ್ನಾಟಕ ರಾಜ್ಯ ಅಂಗವೈಕಲ್ಯವನ್ನುಳ್ಳ ವ್ಯಕ್ತಿಗಳ ಹಕ್ಕುಗಳು ನಿಯಮಗಳು, 2019 ರ ನಿಯಮ 14ರಡಿ, ಅದರಲ್ಲಿ ಉಲ್ಲೇಖಿಸಲಾದ ಪ್ರಮಾಣೀಕರಿಸುವ ಪ್ರಾಧಿಕಾರಕ್ಕೆ (certifying authority) ಅರ್ಜಿಯನ್ನು ಸಲ್ಲಿಸಿ ಅವನು ಅಂಗವೈಕಲ್ಯವನ್ನುಳ್ಳ ಬಗ್ಗೆ ಪ್ರಮಾಣ ಪತ್ರವನ್ನು ಪಡೆಯತಕ್ಕದ್ದು ಹಾಗೂ ಅದನ್ನು ನೇಮಕಾತಿ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು.

(4)ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಗ್ರೂಪ್-ಸಿ ಮತ್ತು ಗ್ರೂಪ್-ಡಿ ಹುದ್ದೆಗಳಿಗೆ ನೇರ ನೇಮಕಾತಿಯ ಪ್ರಮಾಣವನ್ನು ನಿಗದಿಪಡಿಸಿದ್ದಲ್ಲಿ ಹಾಗೂ ಅಂತಹ ನೇರ ನೇಮಕಾತಿಯ ಪ್ರಮಾಣ ಶೇಕಡಾ 75ನ್ನು ಮೀರದಿದ್ದಲ್ಲಿ, ಆ ವೃಂದದ ಹುದ್ದೆಗಳಿಗೆ ಈ ಮುಂಬಡ್ತಿ ಮೀಸಲಾತಿ ಅನ್ವಯವಾಗುತ್ತದೆ.

6. ಈ ಮುಂಬಡ್ತಿ ಮೀಸಲಾತಿಯನ್ನು ನೇಮಕಾತಿ ಪ್ರಾಧಿಕಾರವಾರು ಹಾಗೂ ವೃಂದವಾರು ಜಾರಿಗೊಳಿಸತಕ್ಕದ್ದು. ಈ ಮೀಸಲಾತಿಯನ್ನು ಜಾರಿಗೊಳಿಸಲು 100 ಬಿಂದುಗಳ ಒಂದು ರೋಸ್ಟರನ್ನು ಈ ಆದೇಶದ **ಅನುಬಂಧದಲ್ಲಿ** ಗೊತ್ತುಪಡಿಸಲಾಗಿರುತ್ತದೆ. ಈ ರೋಸ್ಟರಿನಲ್ಲಿ, ಎದ್ದುಕಾಣುವ ಅಂಗವೈಕಲ್ಯವನ್ನುಳ್ಳ ಸರ್ಕಾರಿ ನೌಕರರಿಗೆ ಮುಂಬಡ್ತಿ ಮೀಸಲಾತಿಗಾಗಿ 5, 30, 55 ಮತ್ತು 82ನೇ ಬಿಂದುಗಳನ್ನು ಗುರುತಿಸಲಾಗಿದೆ. ಮುಂಬಡ್ತಿ ಮೀಸಲಾತಿ ಅನ್ವಯವಾಗುವ ವೃಂದಗಳಿಗೆ ಮುಂಬಡ್ತಿ ನೀಡುವಾಗ ಸಕ್ಷಮ ಪ್ರಾಧಿಕಾರ ಎದ್ದುಕಾಣುವ ಅಂಗವೈಕಲ್ಯವನ್ನುಳ್ಳ ಸರ್ಕಾರಿ ನೌಕರರಿಗೆ ಗುರುತಿಸಲಾದ ಬಿಂದುಗಳಿಗೆ ಎದುರಾಗಿ ಆ ವರ್ಗಕ್ಕೆ ಸೇರಿದ ಸರ್ಕಾರಿ ನೌಕರರನ್ನು ಮುಂಬಡ್ತಿಗೆ ಪರಿಗಣಿಸತಕ್ಕದ್ದು.

7. <u>ಬ್ಯಾಕ್‌ಲಾಗ್</u>: ಎದ್ದುಕಾಣುವ ಅಂಗವೈಕಲ್ಯವನ್ನುಳ್ಳ ಸರ್ಕಾರಿ ನೌಕರರಿಗೆ ಮುಂಬಡ್ತಿ ನೀಡಲು ನಿಗದಿಪಡಿಸಿದ ರೋಸ್ಟರಿನ ಬಿಂದುಗಳ ಎದುರಾಗಿ ಮುಂಬಡ್ತಿಗೆ ಅರ್ಹರಾದ ಮತ್ತು ಸೂಕ್ತರಾದ ಎದ್ದುಕಾಣುವ ಅಂಗವೈಕಲ್ಯವನ್ನುಳ್ಳ ಸರ್ಕಾರಿ ನೌಕರರು ಲಭ್ಯವಿಲ್ಲದೇ ಇದ್ದಲ್ಲಿ, ಆ ಬಿಂದುಗಳ ಎದುರಾಗಿ ಮೀಸಲಾತಿ ರಹಿತ ಸರ್ಕಾರಿ ನೌಕರರನ್ನು ಪರಿಗಣಿಸಿ, ಎದ್ದುಕಾಣುವ ಅಂಗವೈಕಲ್ಯವನ್ನುಳ್ಳ ಸರ್ಕಾರಿ ನೌಕರರಿಗೆ ಈ ರೀತಿ ನಷ್ಟವಾದ ರಿಕ್ತಸ್ಥಾನಗಳನ್ನು ಬ್ಯಾಕ್‌ಲಾಗ್

ಎಂದು ಪರಿಗಣಿಸಿ, ಎದ್ದುಕಾಣುವ ಅಂಗವೈಕಲ್ಯವನ್ನುಳ್ಳ ಸರ್ಕಾರಿ ನೌಕರರು ಭವಿಷ್ಯದಲ್ಲಿ ಲಭ್ಯವಾದಾಗ, ಮುಂಬಡ್ತಿಯ ಮುಂದಿನ ಸಂದರ್ಭದಲ್ಲಿ ಮೀಸಲಾತಿ ರಹಿತ ಬಿಂದುಗಳ ಎದುರಾಗಿ ಪರಿಗಣಿಸಿ ಭರ್ತಿ ಮಾಡುವುದರ ಮುಖಾಂತರ ಬ್ಯಾಕ್‌ಲಾಗ್‌ನ್ನು ಸರಿದೂಗಿಸತಕ್ಕದ್ದು. ಈ ರೀತಿ ಬ್ಯಾಕ್‌ಲಾಗ್ ಉಳಿದಿದ್ದಲ್ಲಿ ಆ ಬ್ಯಾಕ್‌ಲಾಗ್‌ನ್ನು 2 ಬಾರಿ ಮುಂಬಡ್ತಿ ನೀಡುವ ಸಂದರ್ಭಕ್ಕೆ ಮಾತ್ರ ಪರಿಗಣಿಸತಕ್ಕದ್ದು, 2 ಸಂದರ್ಭದ ಮುಂಬಡ್ತಿಯ ನಂತರ ಬ್ಯಾಕ್‌ಲಾಗ್ ಹುದ್ದೆಗಳು ವರ್ಗೀಕರಣವನ್ನು ಕಳೆದುಕೊಳ್ಳುತ್ತದೆ. ಅಂತಹ ಹುದ್ದೆಗಳಿಗೆ ಮೀಸಲಾತಿ ರಹಿತ ಸರ್ಕಾರಿ ನೌಕರರನ್ನು ಮುಂಬಡ್ತಿ ನೀಡುವ ಮೂಲಕ ಭರ್ತಿ ಮಾಡತಕ್ಕದ್ದು.

8. ಮುಂಬಡ್ತಿ ನೀಡುವ ಒಂದು ಸಂದರ್ಭದಲ್ಲಿ ಎದ್ದುಕಾಣುವ ಅಂಗವೈಕಲ್ಯವನ್ನುಳ್ಳ ವ್ಯಕ್ತಿಗಳು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ನೌಕರರಾಗಿದ್ದಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಎದ್ದುಕಾಣುವ ಅಂಗವೈಕಲ್ಯವನ್ನುಳ್ಳ ಸರ್ಕಾರಿ ನೌಕರರನ್ನು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಕ್ಕೆ ಗುರುತಿಸಲಾಗಿರುವ ರೋಸ್ಟರ್ ಬಿಂದುವಿನ ಎದುರು ಪರಿಗಣಿಸತಕ್ಕದ್ದು. ಅದೇ ರೀತಿ ಮೀಸಲಾತಿ ರಹಿತ ಸರ್ಕಾರಿ ನೌಕರರು ಎದ್ದುಕಾಣುವ ಅಂಗವೈಕಲ್ಯವನ್ನುಳ್ಳ ವ್ಯಕ್ತಿಗಳಾಗಿದ್ದಲ್ಲಿ ಅವರನ್ನು ಎದ್ದುಕಾಣುವ ಅಂಗವೈಕಲ್ಯವನ್ನುಳ್ಳ ವ್ಯಕ್ತಿಗಳಿಗೆ ಗುರುತಿಸಲಾಗಿರುವ ಬಿಂದುಗಳ ಎದುರು ಪರಿಗಣಿಸತಕ್ಕದ್ದು

9. ಮುಂಬಡ್ತಿ ಮೀಸಲಾತಿ ಅನ್ವಯ ಮುಂಬಡ್ತಿ ಹೊಂದಿದ ಎದ್ದುಕಾಣುವ ಅಂಗವೈಕಲ್ಯವನ್ನುಳ್ಳ ಸರ್ಕಾರಿ ನೌಕರರು ಮುಂಬಡ್ತಿ ಹೊಂದಿದ ವೃಂದದಲ್ಲಿ ಮುಂಬಡ್ತಿ ಹೊಂದಿದ ದಿನಾಂಕದಿಂದ ತತ್ಪರಿಣಾಮವಾದ ಜೇಷ್ಠತೆಗೆ ಅರ್ಹರಾಗುತ್ತಾರೆ. ಮುಂಬಡ್ತಿಯ ಒಂದು ಸಂದರ್ಭದಲ್ಲಿ ಮುಂಬಡ್ತಿ ಹೊಂದಿದ ಎದ್ದುಕಾಣುವ ಅಂಗವೈಕಲ್ಯವನ್ನುಳ್ಳ ಸರ್ಕಾರಿ ನೌಕರರು ಹಾಗೂ ಇತರ ಸರ್ಕಾರಿ ನೌಕರರ ಅಂತರ ಜೇಷ್ಠತೆಯನ್ನು ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತೆ) ನಿಯಮಗಳು, 1957 ರ ನಿಯಮ 4 ರನ್ವಯ ನಿರ್ಧರಿಸತಕ್ಕದ್ದು.

10. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಯವರು, ಪ್ರಧಾನ ಕಾರ್ಯದರ್ಶಿಯವರು ಮತ್ತು ಕಾರ್ಯದರ್ಶಿಯವರು ಅವರವರ ಆಡಳಿತ ವ್ಯಾಪ್ತಿಗೊಳಪಡುವ ಸ್ವಾಯತ್ತ ಸಂಸ್ಥೆಗಳು / ವಿಶ್ವವಿದ್ಯಾಲಯಗಳು / ಸಾರ್ವಜನಿಕ ಉದ್ದಿಮೆಗಳು / ಆಯೋಗ / ನಿಗಮ / ಮಂಡಳಿಗಳು / ಸ್ಥಳೀಯ ಸಂಸ್ಥೆಗಳು ಮತ್ತು ಸರ್ಕಾರದಿಂದ ಅನುದಾನ ಅಥವಾ ಸಹಾಯ ಪಡೆಯುವ ಸಂಸ್ಥೆಗಳು ಇವುಗಳಿಗೆ ಈ ಆದೇಶದಲ್ಲಿನ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚನೆಗಳನ್ನು ನೀಡಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ವೀರಭದ್ರ)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
(ಸೇವಾ ನಿಯಮಗಳು).

## ಅನುಬಂಧ

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 121 ಸೆನೆನಿ 2020 ದಿನಾಂಕ: 28.03.2023

| | | | | | | | |
|---|---|---|---|---|---|---|---|
| 01 | ಪ.ಜಾ. | 26 | ಪ.ಜಾ. | 51 | ಮೀಸಲು ರಹಿತ | 76 | ಮೀಸಲು ರಹಿತ |
| 02 | ಪ.ಪಂ | 27 | ಮೀಸಲು ರಹಿತ | 52 | ಮೀಸಲು ರಹಿತ | 77 | ಮೀಸಲು ರಹಿತ |
| 03 | ಮೀಸಲು ರಹಿತ | 28 | ಮೀಸಲು ರಹಿತ | 53 | ಮೀಸಲು ರಹಿತ | 78 | ಮೀಸಲು ರಹಿತ |
| 04 | ಮೀಸಲು ರಹಿತ | 29 | ಮೀಸಲು ರಹಿತ | 54 | ಮೀಸಲು ರಹಿತ | 79 | ಪ.ಪಂ |
| 05 | ಅಂಗವಿಕಲ | 30 | ಅಂಗವಿಕಲ | 55 | ಅಂಗವಿಕಲ | 80 | ಪ.ಜಾ. |
| 06 | ಮೀಸಲು ರಹಿತ | 31 | ಪ.ಪಂ | 56 | ಪ.ಜಾ. | 81 | ಮೀಸಲು ರಹಿತ |
| 07 | ಪ.ಜಾ. | 32 | ಪ.ಜಾ. | 57 | ಮೀಸಲು ರಹಿತ | 82 | ಅಂಗವಿಕಲ |
| 08 | ಮೀಸಲು ರಹಿತ | 33 | ಮೀಸಲು ರಹಿತ | 58 | ಮೀಸಲು ರಹಿತ | 83 | ಮೀಸಲು ರಹಿತ |
| 09 | ಮೀಸಲು ರಹಿತ | 34 | ಮೀಸಲು ರಹಿತ | 59 | ಮೀಸಲು ರಹಿತ | 84 | ಮೀಸಲು ರಹಿತ |
| 10 | ಮೀಸಲು ರಹಿತ | 35 | ಮೀಸಲು ರಹಿತ | 60 | ಮೀಸಲು ರಹಿತ | 85 | ಮೀಸಲು ರಹಿತ |
| 11 | ಮೀಸಲು ರಹಿತ | 36 | ಮೀಸಲು ರಹಿತ | 61 | ಮೀಸಲು ರಹಿತ | 86 | ಪ.ಜಾ. |
| 12 | ಮೀಸಲು ರಹಿತ | 37 | ಮೀಸಲು ರಹಿತ | 62 | ಪ.ಜಾ. | 87 | ಮೀಸಲು ರಹಿತ |
| 13 | ಪ.ಜಾ. | 38 | ಪ.ಜಾ. | 63 | ಮೀಸಲು ರಹಿತ | 88 | ಮೀಸಲು ರಹಿತ |
| 14 | ಮೀಸಲು ರಹಿತ | 39 | ಮೀಸಲು ರಹಿತ | 64 | ಪ.ಪಂ | 89 | ಮೀಸಲು ರಹಿತ |
| 15 | ಪ.ಪಂ | 40 | ಮೀಸಲು ರಹಿತ | 65 | ಮೀಸಲು ರಹಿತ | 90 | ಮೀಸಲು ರಹಿತ |
| 16 | ಮೀಸಲು ರಹಿತ | 41 | ಮೀಸಲು ರಹಿತ | 66 | ಮೀಸಲು ರಹಿತ | 91 | ಪ.ಜಾ. |
| 17 | ಮೀಸಲು ರಹಿತ | 42 | ಮೀಸಲು ರಹಿತ | 67 | ಮೀಸಲು ರಹಿತ | 92 | ಮೀಸಲು ರಹಿತ |
| 18 | ಮೀಸಲು ರಹಿತ | 43 | ಮೀಸಲು ರಹಿತ | 68 | ಪ.ಜಾ. | 93 | ಮೀಸಲು ರಹಿತ |
| 19 | ಮೀಸಲು ರಹಿತ | 44 | ಪ.ಜಾ. | 69 | ಮೀಸಲು ರಹಿತ | 94 | ಮೀಸಲು ರಹಿತ |
| 20 | ಪ.ಜಾ. | 45 | ಮೀಸಲು ರಹಿತ | 70 | ಮೀಸಲು ರಹಿತ | 95 | ಪ.ಪಂ |
| 21 | ಮೀಸಲು ರಹಿತ | 46 | ಮೀಸಲು ರಹಿತ | 71 | ಮೀಸಲು ರಹಿತ | **96** | ಪ.ಜಾ. |
| 22 | ಮೀಸಲು ರಹಿತ | 47 | ಮೀಸಲು ರಹಿತ | 72 | ಮೀಸಲು ರಹಿತ | 97 | ಮೀಸಲು ರಹಿತ |
| 23 | ಮೀಸಲು ರಹಿತ | 48 | ಪ.ಪಂ | 73 | ಮೀಸಲು ರಹಿತ | 98 | ಮೀಸಲು ರಹಿತ |
| 24 | ಮೀಸಲು ರಹಿತ | 49 | ಮೀಸಲು ರಹಿತ | 74 | ಪ.ಜಾ. | 99 | ಮೀಸಲು ರಹಿತ |
| 25 | ಮೀಸಲು ರಹಿತ | 50 | ಪ.ಜಾ. | 75 | ಮೀಸಲು ರಹಿತ | 100 | ಮೀಸಲು ರಹಿತ |

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



## ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 121 ಸೇನೆನಿ 2020

ಕರ್ನಾಟಕ ಸರ್ಕಾರ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:01.04.2023.

## ಸೇರ್ಪಡೆ ಆದೇಶ

ಇದೇ ಸಮ ಸಂಖ್ಯೆಯ ಸರ್ಕಾರದ ಆದೇಶ ದಿನಾಂಕ: 28.03.2023ರ ಕಂಡಿಕೆ 9ರ ನಂತರ ಈ ಕೆಳಕಂಡ ಕಂಡಿಕೆಯನ್ನು ಸೇರ್ಪಡಿಸಿ ಓದಿಕೊಳ್ಳತಕ್ಕದ್ದೆಂದು ಆದೇಶಿಸಿದೆ.

**10. ದಿನಾಂಕ: 28.03.2023ರ ಆದೇಶ ಸಂಖ್ಯೆ: ಸಿಆಸುಇ 121 ಸೇನೆನಿ 2020ರ ಆದೇಶದ ದಿನಾಂಕದ ಪೂರ್ವದಲ್ಲಿ ದಿನಾಂಕ: 28.12.2022ರ ಆದೇಶ ಸಂಖ್ಯೆ: ಸಿಆಸುಇ 02 ಸೆಹಿಮ 2022ರ ಅನುಬಂಧದಲ್ಲಿರುವ ರೋಸ್ಟರಿನನ್ವಯ ಗುಂಪು-ಡಿ ಮತ್ತು ಗುಂಪು-ಸಿ ಹುದ್ದೆಗಳಿಗೆ ಮುಂಬಡ್ತಿ ನೀಡಿದ್ದಲ್ಲಿ ಯಾವ ಬಿಂದುವಿನವರೆಗೆ ಮುಂಬಡ್ತಿ ನೀಡಲಾಗಿದೆಯೋ ಆ ನಂತರದ ಬಿಂದುವಿನಿಂದ ಮುಂದುವರೆಸತಕ್ಕದ್ದು.**

2. ಇದೇ ಸಮ ಸಂಖ್ಯೆಯ ಸರ್ಕಾರದ ಆದೇಶ ದಿನಾಂಕ: 28.03.2023ರ **ಕಂಡಿಕೆ 10ನ್ನು ಕಂಡಿಕೆ 11** ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ವೀರಭದ್ರ)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
(ಸೇವಾ ನಿಯಮಗಳು-1).

**PR-160**

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು-59.

S VISWANATH